ಶ್ರೀ ಡಿ.ಬಿ. ಚಂದ್ರೇಗೌಡ:– ಹಿರಿಯ ಸದಸ್ಯರಾದ ಮಾನ್ಯ ಹನುಮೇಗೌಡರವರಿಗೆ ಏನು ತಾಪತ್ರಯ ಇದೆ ಅದು ಈಗ ನನಗೆ ಬಂದಿದೆ. ನಿಮ್ಮ ಕಛೇರಿಗೆ ಇನ್ನು ಬರುತ್ತಾರೋ ಇಲ್ಲವೋ ಗೊತ್ತಿಲ್ಲ, ಆದರೆ ನನ್ನ ಕಛೇರಿಗೆ ಬರುತ್ತಿದ್ದಾರೆ. ಅದಕ್ಕೆ ನಾನು 13ನೇ ತಾರೀಖು ಪೂರ್ಣ ಮಾಹಿತಿ ತೆಗೆದುಕೊಂಡು, ಈ ಸಾರಿ ಅಡಿಷನಲ್ ಫೈನಾನ್ಸ್ ಕೇಳಿದ್ದೇನೆ. ಹಣ ಬಂದ ತಕ್ಷಣ ಅಲ್ಲಿಯ ಪರಿಸ್ಥಿತಿಗನುಗುಣವಾಗಿ ತಾವು ಹೇಳಿದ ಹಾಗೆ ಆದ್ಯತೆಯ ಪಟ್ಟಿ ಇಟ್ಟುಕೊಂಡು ಹಣ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ:– ನಮಗೆ 23 ಸಾವಿರ ಕಾಮಗಾರಿಗಳ ವಿವರ ಬೇಕಾಗಿಲ್ಲ. ಏಕೆಂದರೆ, ಮಾನ್ಯ ನಂಜುಂಡಪ್ಪನವರು ಎಂಎಡಿಬಿ ಇವೆಲ್ಲವನ್ನೂ ರದ್ದು ಮಾಡಬೇಕು ಎನ್ನುವ ವರದಿ ಕೊಟ್ಟಿದ್ದಾರೆ. ಆದ್ದರಿಂದ ಪ್ರತಿ ಕ್ಷೇತ್ರಕ್ಕೂ ಎಷ್ಟು ಕೊಟ್ಟಿದ್ದಾರೆಂದು ಉತ್ತರ ಕೊಟ್ಟಿದ್ದರೆ ಏಕೆ ಅವರು ರೆಕ್‌ಮೆಂಡ್ ಮಾಡಿದರು ಎನ್ನುವುದು ಗೊತ್ತಾಗುತ್ತಿತ್ತು. ಈಗಲಾದರೂ ಸರ್ಕಾರ ಇದನ್ನು ರದ್ದು ಮಾಡಬೇಕು ಎನ್ನುವ ಆಲೋಚನೆಯಲ್ಲಿದೆಯೇ? ನಾನು ಈ ಪ್ರಶ್ನೆಯನ್ನು ಮಾನ್ಯ ಸಚಿವರಲ್ಲಿ ಏಕೆ ಕೇಳುತ್ತಿದ್ದೇನೆಂದರೆ ನಮಗೆ ಗೊತ್ತಿದ್ದ ಹಾಗೆ ಒಂದೊಂದು ಕ್ಷೇತ್ರಕ್ಕೂ 20,30,40 ಲಕ್ಷ ರೂ. ಕೊಡುತ್ತಿದ್ದರು, ಕಳೆದ ವರ್ಷ ಕೇವಲ ಎರಡೂವರೆ ಲಕ್ಷ ರೂ ಕೂಡ ಕೊಡಲಿಲ್ಲ. ಈ ವರ್ಷವಂತೂ ಏನೂ ಇಲ್ಲ. ಹಾಗಾದರೆ ಏನು ಇದರ ಸಮಾಚಾರ? ಏನಾದರೂ ಇದನ್ನು ರದ್ದು ಮಾಡುವ ಆಲೋಚನೆ ಮಾಡಿದ್ದೀರಾ? ಕ್ಷೇತ್ರವಾರು ಇಂತಿಷ್ಟು ಹಣ ಕೊಟ್ಟಿದ್ದೇವೆ ಎನ್ನುವ ಮಾಹಿತಿಯನ್ನಾದರೂ ಇವರು ಕೊಡಬಹುದಾಗಿತ್ತು. ಕಾಮಗಾರಿ ವಿವರ ಬೇಕಾಗಿರಲಿಲ್ಲ, ಮಾನ್ಯ ಸಚಿವರು ಬಹಳ ಬುದ್ಧಿವಂತಿಕೆಯಿಂದ ಇಲ್ಲಿ ಉತ್ತರ ಕೊಟ್ಟಿದ್ದಾರೆಂದು ನನ್ನ ಭಾವನೆ ದಯಮಾಡಿ ಅದನ್ನು ಮುಚ್ಚುತ್ತೀರಾ ಅಥವಾ ಉಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ:– ಈ ಮಂಡಳಿಯನ್ನು ಮುಚ್ಚುವಂಥ ಆಲೋಚನೆ ಇದುವರೆಗೆ ನನ್ನ ಹತ್ತಿರ ಇಲ್ಲ. ನಾನು ಚಾರ್ಜ್ ತೆಗೆದುಕೊಂಡು ಒಂದು ತಿಂಗಳು ಆಗಿದೆ. 13ನೇ ತಾರೀಖಿನ ದಿವಸ ಮಂಡಳಿಯ ಕೇಂದ್ರ ಕಛೇರಿಗೆ ಹೋಗುವವನಿದ್ದೇನೆ, ನಾನು ಇದನ್ನು ಉಳಿಸುವ ಪ್ರಯತ್ನ ಮಾಡುತ್ತೇನೆ, ಕೇವಲ ಉಳಿಸಿದರೆ ಸಾಲದು, ಅದನ್ನು ಯಾವ ಸಲುವಾಗಿ ರಚನೆ ಮಾಡಿದೆವೋ ಆ ಸಲುವಾಗಿ ಅದು ಕೆಲಸ ಮಾಡಲು ಸಾಧ್ಯವಾಗದೇ ಇದ್ದರೆ ಅದನ್ನು ಮುಚ್ಚುವ ಆಲೋಚನೆ ಮಾಡಬೇಕಾಗುತ್ತದೆ. ಆದುದರಿಂದ, ನನ್ನ ಈ ಪ್ರಯತ್ನಕ್ಕೆ ತಮ್ಮ ಸಹಕಾರವನ್ನು ಕೋರುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ರಾಜುಗೌಡರವರೇ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಬಗ್ಗೆ ನಾನೇ ಪ್ರಶ್ನೆ ಕೇಳಿಬಿಡುತ್ತೇನೆ ಏಕೆಂದರೆ ಮಾನ್ಯ ಸದಸ್ಯರು ಇಲ್ಲ, ತಾವು ದಯಮಾಡಿ ಇದಕ್ಕೆ ಉತ್ತರಿಸಿ. ಏಕೆಂದರೆ ಈ ಪ್ರಶ್ನೆ ತುಂಬಾ ಪ್ರಾಮುಖ್ಯತೆಯಿಂದ ಕೂಡಿದೆ ಏಕೆಂದರೆ ನಾನು ಬಯಲು ಸೀಮೆ ವ್ಯಾಪ್ತಿಯಲ್ಲಿ ಬರುತ್ತೇನೆ.

ಬಯಲು ಸೀಮೆ ಅಭಿವೃದ್ಧಿ ಮಂಡಳಿ ಯೋಜನೆಗಳು

146(1524) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ) ಮಾನ್ಯ ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001ನೇ ಸಾಲಿನಲ್ಲಿ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಹಣವೆಷ್ಟು?

ಅ) ಯಾವ ಯಾವ ಯೋಜನೆಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಇ) ಆ ಯೋಜನೆಗಳು ಮತ್ತು ಕಾಮಗಾರಿಗಳು ಎಷ್ಟು ಮತ್ತು ಅವು ಯಾವುವು;

ಈ) ಇದರಲ್ಲಿ ಪೂರ್ಣಗೊಂಡ ಮತ್ತು ಅಪೂರ್ಣವಾದ ಕಾಮಗಾರಿಗಳು ಯಾವುವು?

ಶ್ರೀ ರಾಜುಗೌಡ (ಕೃಷಿ ಉತ್ಪನ್ನ ಸಂಸ್ಕರಣೆ ಮತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು)

ಅ) 2000-01ರಲ್ಲಿ 525 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಇಟ್ಟಿದ್ದು, 230 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುತ್ತದೆ.

ಆ) ಇ) ಕೃಷಿ ಮತ್ತು ಇತರ ಕಾರ್ಯಕ್ರಮಗಳಿಗೆ ಹಾಗೂ ರಸ್ತೆ, ಸೇತುವೆ, ಪಶುಚಿಕಿತ್ಸಾಲಯ, ಕುಡಿಯುವ ನೀರು ಇತ್ಯಾದಿ ಯೋಜನೆಗಳಿಗೆ ಕ್ರಿಯಾ ಯೋಜನೆಯನ್ನು ಸಲ್ಲಿಸಿದ್ದು ಈ ಕ್ರಿಯಾ ಯೋಜನೆ ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಈ) 794 ಕಾಮಗಾರಿಗಳು ಪೂರ್ಣಗೊಂಡಿದ್ದು, 315 ಕಾಮಗಾರಿಗಳು ಪೂರ್ಣಗೊಳ್ಳಬೇಕಾಗಿರುತ್ತದೆ.

ಶ್ರೀ ಎಸ್.ಎಸ್ ಪಾಟೀಲ್:- ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಒಬ್ಬ ಮಂತ್ರಿಗಳು ಇದ್ದಾರೆ ಎನ್ನುವುದು ನಮಗೆ ಇವತ್ತು ಗೊತ್ತಾಯಿತು, ಸಂತೋಷ, 2000-01ನೇ ಸಾಲಿನಲ್ಲಿ ಆಯವ್ಯಯದಲ್ಲಿ ಇರುವುದು 525 ಲಕ್ಷ ರೂಪಾಯಿಗಳು. 230 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, ಹಾಗಾದರೆ ಏಕೆ ಅದನ್ನು ಇಡಬೇಕು? ಮಾನ್ಯ ಅಧ್ಯಕ್ಷರೆ, ತಮ್ಮ ಕ್ಷೇತ್ರವೂ ಇದರ ವ್ಯಾಪ್ತಿಯಲ್ಲಿ ಬರುತ್ತದೆ ಹಿಂದೆ ನಾವು ಸತ್ಯಾಗ್ರಹ ಮಾಡಿ ಪಕ್ಷಾತೀತವಾಗಿ ಬಾವಿಗೆ ಬೀಳುವುದಕ್ಕೆ ಹೋಗಿದ್ದಾಗ ತಾವು ಬೇಡ ಎಂದು ಹೇಳಿದಿರಿ, ನಾವು ಇದರ ಬಗ್ಗೆ ಸತ್ಯಾಗ್ರಹ ಮಾಡುವುದಂತೂ ಖಂಡಿತ. ಇಲ್ಲದಿದ್ದರೆ ಏನೂ ಆಗುವುದಿಲ್ಲ, ನಂತರ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇನೆಂದರು ಅದರ ಬಗ್ಗೆ ಇಲ್ಲಿ ಏನೂ ಪ್ರಸ್ತಾಪ ಇಲ್ಲ. 50 ಲಕ್ಷ ರೂಪಾಯಿ ನಬಾರ್ಡ್‌ದಲ್ಲಿ ಕಳುಹಿಸುತ್ತೇವೆಂದು ಹೇಳಿದ್ದರು ಅದರ ಬಗ್ಗೆ ಉತ್ತರದಲ್ಲಿ ಏನೂ ಹೇಳಿಲ್ಲ. ಬಹುಶಃ ತಮಗೆ ಗೊತ್ತಿಲ್ಲ, ಹಿಂದಿನ ಸಚಿವರಿಗೆ ಅದೆಲ್ಲವೂ ಗೊತ್ತಿತ್ತು. 50 ಲಕ್ಷ ರೂಪಾಯಿಗಳನ್ನು ನಬಾರ್ಡ್‌ದಲ್ಲಿ ಕಳುಹಿಸುತ್ತೇವೆಂದು ಹೇಳಿದ್ದರು. ಅದಕ್ಕೂ ಏನೂ ಉತ್ತರವಿಲ್ಲ, ದಯಮಾಡಿ ಆ ಹಣವನ್ನು ಬಿಡುಗಡೆ ಮಾಡಿಸುತ್ತೀರೋ ಅಥವಾ ಇಲ್ಲವೋ, ಆಗ ತಾವೇನು ಜವಾಬ್ದಾರಿ ತೆಗೆದು ಕೊಂಡು ಹೇಳಿದ್ದೀರಲ್ಲಾ. ಮುಂದಿನ ಸಲ 25 ಲಕ್ಷ ರೂಪಾಯಿಗಳನ್ನು ಇಡಿಸುತ್ತೀರಾ ಎಂಬುದನ್ನು ಕೂಡ ತಾವು ಹೇಳಬೇಕಾಗುತ್ತದೆ.

ಶ್ರೀ ಬಿ.ಆರ್. ಯಾವಗಲ್:- ಮೂರು ವರ್ಷಗಳಿಂದ ನಾನು ನೋಡುತ್ತಿದ್ದೇನೆ ಇದು ಒಂದಿಂಚೂ ಮುಂದೆ ಹೋಗಿಲ್ಲ. ಇತ್ತೀಚಿಗೆ ಎರಡು ವರ್ಷಗಳ ಕೆಳಗಡೆ ನನ್ನ ತಾಲ್ಲೂಕು ಇದರಲ್ಲಿ ಸೇರಿತ್ತು. ನನ್ನ ದುರ್ದೈವಕ್ಕೆ ಇಲ್ಲಿಯವರೆಗೂ ಒಂದು ಪೈಸೆಯೂ ಈ ಖೋರ್ಡ್‌ನಿಂದ ಬಂದಿಲ್ಲ. ಹಿಂದಿನ ಸಚಿವರು ಮಾಡುತ್ತೇವೆಂದು ಹೇಳಿದ್ದರು, ಎರಡು ಮೀಟಿಂಗ್ ಮಾಡಿದರು, ಒಂದು ಚಿತ್ರದುರ್ಗದಲ್ಲಿ ಮತ್ತೊಂದು ಬೆಂಗಳೂರಿನಲ್ಲಿ ಮಾಡಿದರು. ಮೀಟಿಂಗ್ ಮಾಡುವುದೇ ಒಂದು ದೊಡ್ಡ ಸಾಧನೆಯಾಯಿತು. ಇದರಲ್ಲಿ ತಮ್ಮ ಕ್ಷೇತ್ರವು ಸೇರಿರುವುದರಿಂದ ತಮಗೂ ಗೊತ್ತಿದೆ. 44 ಕೋಟಿ ರೂಪಾಯಿ ನಬಾರ್ಡ್‌ಗೆ ಪ್ರಪೊಸಲ್ ಹೋದರೆ ದುರ್ದೈವಕ್ಕೆ 11 ಕೋಟಿ ರೂಪಾಯಿ ಅಪ್ರೂವಲ್ ಆಗಿ ಬಂದರೂ ಅದು ಸಹಿತ ಇನ್ನು ಬಂದಿಲ್ಲ. 50 ಲಕ್ಷ

ರೂಪಾಯಿಗಳನ್ನು ಒಂದೊಂದು ಮತಕ್ಷೇತ್ರಕ್ಕೆ ಕೊಡುತ್ತೇವೆಂದು ಹೇಳಿದ್ದರಿಂದ ಪ್ರಪೋಸಲ್ ಬಿಲ್ಡ್‌ಅಪ್ ಮಾಡಿ ಕಳುಹಿಸಿದರೆ ಅದಕ್ಕೂ ಯಾವ ಉತ್ತರವೂ ಇಲ್ಲ. ತಾವು ಇದಕ್ಕೆ ಮುಂದಾಗಿ ಇದಕ್ಕೆ ಒಂದು ಜೀವ ತುಂಬಬೇಕು, ಬೇರೆಯವರಿಗೆ ಇದು ಸಾಧ್ಯವಾಗುವುದಿಲ್ಲ. ಮಾನ್ಯ ಸಚಿವರ ಬಗ್ಗೆ ಆಕ್ಷೇಪಣೆ ಇಲ್ಲ ಅವರಾದರೂ ಇನ್ನು ಮುಂದೆ ಹೆಚ್ಚಿನ ಆಸಕ್ತಿ ತೆಗೆದುಕೊಂಡು ಚಾಲನೆ ಕೊಟ್ಟು ಇದನ್ನು ನಡೆಸಬೇಕು. ಇಲ್ಲದಿದ್ದರೆ, ಈಗ ತಾನೇ ಮಲ್ಲಾಡು ಅಭಿವೃದ್ಧಿ ಮಂಡಳಿಯ ಬಗ್ಗೆ ಏನು ಚರ್ಚೆಯಾಯಿತು. ಬಹುಶಃ ನಾವು ಎಲ್ಲರೂ ಸಭ್ಯರಿದ್ದೇವೆಂದು ಕಾಣಿಸುತ್ತದೆ. ಪಕ್ಷಾತೀತವಾಗಿ ಹೇಳುವುದಾದರೆ ಇದೊಂದು ಮಿನಿ ಅಸೆಂಬ್ಲಿ ಎಂದು ಅವರೇನು ಹೇಳಿದರು. ಇದು ನಿಜವಾಗಿಯೂ ಬಯಲು ಸೀಮೆ ಮೆಗಾ ಅಸೆಂಬ್ಲಿ, ಏಕೆಂದರೆ ಇದರಲ್ಲಿ ಬಹಳಷ್ಟು ತಾಲ್ಲೂಕುಗಳು ಸೇರಿವೆ. ತಾವು ದಯಮಾಡಿ ಇದರ ಬಗ್ಗೆ ಹೇಗೆ ಪ್ರಶ್ನೆ ಕೇಳಿದಿರಿ. ಅದೇರೀತಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:– ಮಾನ್ಯ ರಾಜುಗೌಡರೇ, ಇದನ್ನು ರದ್ದುಮಾಡಿಬಿಡಿ, ಆಗ ನಾವು ಜನಗಳಿಗೆ ಇದನ್ನು ರದ್ದುಮಾಡಿರುವುದರಿಂದ ನಾವು ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಬಹುದು.

ಶ್ರೀ ಶಿವಾನಂದ ಎಸ್ ಪಾಟೀಲ್:– ನಮ್ಮ ಮಲ್ಲಾಡು ನೋಡಿದ ಮೇಲೆ ಬಯಲುಸೀಮೆ ನೋಡುವುದಕ್ಕೆ ಬರಾಬರಿ ಮಂತ್ರಿಯನ್ನು ಕೊಟ್ಟಿದ್ದಾರೆ. ಮಲ್ಲಾಡು ನೋಡಿದ ಮೇಲೆ ಅದು ಎಷ್ಟು ಸಶಕ್ತ ಇದೆ ಎನ್ನುವುದು ಗೊತ್ತಾಯಿತು. ಬಯಲುಸೀಮೆ ಎಷ್ಟು ಸಶಕ್ತ ಇದೆ ಎಂಬುದಕ್ಕೆ ಮಂತ್ರಿಗಳನ್ನು ನೋಡಿ ತಿಳಿದುಕೊಳ್ಳಬಹುದು. ಈ ಮಂಡಳಿಗೆ ಎಷ್ಟು ಕ್ಷೇತ್ರಗಳು ಬರುತ್ತಿವೆ ಎಂಬುದನ್ನು ಮಂತ್ರಿಗಳು ಹೇಳಬೇಕು. ನಾವು ಸತ್ಯಾಗ್ರಹ ಮಾಡಿ ಬಾವಿಗೆ ಬರುತ್ತೇವೆ ಬಹುಶಃ ನೀವೂ ಕೂಡ ಬರಬಹುದೆಂದು ನನಗೆ ಸಂಶಯ ಬರುತ್ತದೆ.

ಅಧ್ಯಕ್ಷರು:– ನಾನು ಹೇಗೆ ಬಾವಿಗೆ ಬರುವುದಕ್ಕಾಗುತ್ತದೆ.?

ಶ್ರೀ ಶಿವಾನಂದ ಎಸ್. ಪಾಟೀಲ್:– ಈ ಸಾರಿ ಬಿದ್ದರೆ ನಿಮ್ಮನ್ನು ಎಳೆದುಕೊಂಡೇ ಬೀಳುತ್ತೇವೆ. ಏಕೆಂದರೆ, ಸಾರಿ ಸಾರ್, ಬಯಲು ಸೀಮೆಯಲ್ಲಿ ಅಷ್ಟೊಂದು ತೊಂದರೆಗಳಿವೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹೇಗೆ ರಿಸೋರ್ಸ್ ಬಗ್ಗೆ ಏನೂ ತ್ರಾಸು ಇಲ್ಲ. ಏಕೆಂದರೆ ಅವರೇ ಹೇಳಿದ ಹಾಗೆ, ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 2000 ಕೋಟಿರೂಪಾಯಿ ರೆವಿನ್ಯೂ ಹೆಚ್ಚಿಗೆ ಬಂದಿದೆ. ಏಕ್ಸ್ ಜೈಸ್‌ನಲ್ಲಿ ಹೆಚ್ಚಿಗೆ ಬಂದಿದೆಯಂತೆ ಕನಿಷ್ಠ ನಾಲ್ಕು ಸಾವಿರ ಕೋಟಿ ರೂಪಾಯಿ ಹೆಚ್ಚಿಗೆ ಬಂದಿದೆ. ಅದರಲ್ಲಿ ಕನಿಷ್ಠ 500 ಕೋಟಿ ರೂಪಾಯಿಗಳನ್ನಾದರೂ ಕೊಡಿಸಿದರೆ ಸಾಕು.

ಶ್ರೀ ಜಗದೀಶ್ ಶೆಟ್ಟರ್:– ಪ್ರತಿ ಸದನದಲ್ಲೂ ಇದರ ಬಗ್ಗೆ ಚರ್ಚೆ ನಡೆಯುತ್ತದೆ. ಆದರೆ ಪೈಸೆ ಜಾಸ್ತಿ ಬರಲಿಲ್ಲ. ಆದ್ದರಿಂದ ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಇದನ್ನು ಮುಚ್ಚಿಬಿಡಿ. ಏಕೆಂದರೆ, ಜನರಿಗೆ ನಾವು ಅಲ್ಲಿ ಏನು ಹೇಳಬೇಕು? ಹಿಂದೆ ಮಾನ್ಯ ರಮಾನಾಥ್ ರೈ ಅವರು ಸಚಿವರು ಇದ್ದಾಗ 50 ಲಕ್ಷ ರೂಪಾಯಿಗಳಿಗೆ ಪ್ರಪೋಸಲ್ ತೆಗೆದುಕೊಂಡರು 50 ಲಕ್ಷ ರೂಪಾಯಿಗಳಿಗೆ ಪ್ರಪೋಸಲ್ ತೆಗೆದುಕೊಂಡರೂ ಏನೂ ಬರಲಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ ತಾವು ಮೊನ್ನೆ ಒಂದು ಸಾರ್ವಜನಿಕ ಸಭೆಯಲ್ಲಿ ನೇತ್ರಾವತಿ ಇದರ ಬಗ್ಗೆ ಹೋರಾಟ ಮಾಡುವ ಸಂದರ್ಭದಲ್ಲಿ ತಮ್ಮದೊಂದು ಹೇಳಿಕೆ ನೋಡಿದೆ. "ನಾನು ಇಂಥದ್ದಕ್ಕೆ ಅನ್ಯಾಯ ಆದರೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಹೋರಾಟ ಮಾಡುತ್ತೇನೆ" ಎಂದು ಹೇಳಿದ್ದೀರಿ. ನಮ್ಮ ಹಣೆ

ಬರಹ ಇಷ್ಟೇ ಇರುವುದರಿಂದ ನಮ್ಮ ಈ ಒಂದು ಹೋರಾಟಕ್ಕೆ ತಾವು ನೇತೃತ್ವವಹಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- 1992ನೇ ಇಸ್ವಿಯಲ್ಲಿ ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾಗ ಹೋರಾಟ ಮಾಡಿ ಇದನ್ನು ಪೂರ್ಣಗೊಳಿಸಿದ್ದೆವು.

ಶ್ರೀ ಜಗದೀಶ್ ಶೆಟ್ಟರ್:- ಹಿಂದಿನ ಸರ್ಕಾರದಲ್ಲಿ ಮಾನ್ಯ ಭೈರೇಗೌಡರವರು ಇದ್ದರು, ಹಣ ಜಾಸ್ತಿ ಕೊಡಲಿಕ್ಕೆ ಅವರ ಕೈಯ್ಯಲ್ಲಿ ಆಗಲಿಲ್ಲ. ಈ ಸಲ ಎರಡೂವರೆ ವರ್ಷದಿಂದಲೂ ನೋಡುತ್ತಿದ್ದೇವೆ ಒಂದು ಲಕ್ಷ ಹೋಗಲಿ 50 ಸಾವಿರ ರೂಪಾಯಿಗಳಾದರೂ ಜಾಸ್ತಿ ಸಿಗಲಿಲ್ಲ. ಇದು ಪ್ರತಿ ಸಲ ನಡೆಯುತ್ತಿದೆ, ಅದಕ್ಕೆ ಇದಕ್ಕೆ ಏನಾದರೂ ಪರಿಹಾರ ಇದೆಯೋ ಇಲ್ಲವೋ? ಇದಕ್ಕೆ ನಿರ್ದಿಷ್ಟವಾದ ಉತ್ತರ ಸಿಗಲಿ. ಈಗ ಅರ್ಧ ಹಣ ಬಿಡುಗಡೆ ಮಾಡಿದ್ದಾರೆ ಹಾಗಾಗಿ ಎಲ್ಲಾ ಕೆಲಸಗಳು ಅರ್ಧ ಆಗಿವೆ.

6.10 ಪಿ.ಎಂ.

ಒಂದೊಂದು ಕಾಮಗಾರಿಗೆ ಸುಮಾರು 4 ಲಕ್ಷ ರೂಪಾಯಿ ಮಂಜೂರಾಗಿದ್ದರೆ ಅದರಲ್ಲಿ ಕೇವಲ ಒಂದೂವರೆ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಆದ್ದರಿಂದ ಕೆಲಸಗಳೆ ಅರ್ಧಕ್ಕೆ ನಿಂತಿವೆ. ಹಣ ಬಿಡುಗಡೆ ಮಾಡಲು ಏನು ತೊಂದರೆಯಾಗಿದೆ ಎನ್ನತಕ್ಕಂಥದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ಒಂದು ವೇಳೆ ಹಣಕಾಸಿನ ತೊಂದರೆ ಏನಾದರೂ ಆಗಿದ್ದರೆ ನಾವೆಲ್ಲರೂ ಸೇರಿ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಡ ತರೋಣ. ಆದ್ದರಿಂದ ಏನು ತೊಂದರೆಯಾಗಿದೆ ಎನ್ನತಕ್ಕಂಥದನ್ನು ದಯವಿಟ್ಟು ಹೇಳಬೇಕು. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿ ನಮಗೆಲ್ಲಾ ಸಮಾಧಾನಕರ ಉತ್ತರ ಹೇಳುವುದಕ್ಕೆ ಹೋಗಬೇಡಿ. ಅಲ್ಲಿರತಕ್ಕಂಥ ನಿಜವಾದ ಸಮಸ್ಯೆಯನ್ನು ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿರತಕ್ಕಂಥದ್ದು ಸರಿಯಾಗಿದೆ ನೇತ್ರಾವತಿ ನದಿ ನೀರನ್ನು ಈ ಕಡೆಗೆ ತಿರುಗಿಸದೇ ಹೋದರೆ ನನ್ನ ಸ್ಥಾನವನ್ನು ಬಿಟ್ಟು ಡಿಸೆಂಬರ್ ತಿಂಗಳೊಳಗಾಗಿ ಹೋರಾಟ ಮಾಡುತ್ತೇನೆಂದು ತಾವು ಧೈರ್ಯದಿಂದ ಹೇಳಿರತಕ್ಕಂಥ ಮಾತಿಗೆ ನಾನು ಮೊದಲನೆಯದಾಗಿ ತಮಗೆ ಅಭಿನಂದಿಸುತ್ತೇನೆ. ಆ ಸ್ಥಾನದಲ್ಲಿರತಕ್ಕಂಥವರು ಹೇಳಿದಾಗ ಸರ್ಕಾರಕ್ಕೆ ಸ್ವಲ್ಪ ಮೈ ಬಿಸಿ ಆಗುತ್ತದೆ ಹಾಗೆಯೇ, ಕಿವಿ ಕೇಳಿಸುತ್ತದೆ ಮತ್ತು ಕಣ್ಣು ಕಾಣಿಸುತ್ತದೆ. ಆದ್ದರಿಂದ, ಆ ಕೆಲಸವೂ ಕೂಡ ಪ್ರಾರಂಭವಾಗುತ್ತದೆ ತಾವು ಹೇಳಿರತಕ್ಕಂಥದನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ರಾಜುಗೌಡರವರು ಹೊಸದಾಗಿ ಮಂತ್ರಿಯಾಗಿದ್ದು, ಇದರ ಜೊತೆಗೆ ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಅಧಿಕಾರವನ್ನು ವಹಿಸಿಕೊಂಡಿದ್ದಾರೆ. ಆದ್ದರಿಂದ, ಅವರನ್ನು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ವಿಶೇಷವಾದ ಚರ್ಚೆಗೋಸ್ಕರ ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ:- ಇವತ್ತು ನಿಮ್ಮಬ್ಬರಲ್ಲಿ ಏನೋ ಒಳಸಂಚು ನಡೆದಿರುವ ಹಾಗೆ ಕಾಣುತ್ತದೆ!

ಶ್ರೀ ಪಿ.ಜಿ.ಆರ್. ಸಿಂಧ್ಯ:- ಸಂಚು, ಒಳಸಂಚು ಅಥವಾ ಏನು ಕೆಲಸ ಆಗಿದೆ ಎನ್ನತಕ್ಕಂಥದ್ದು ನನಗೂ ಮತ್ತು ಮಾನ್ಯ ಅಧ್ಯಕ್ಷರಿಗೆ ಮಾತ್ರ ಗೊತ್ತಿದೆ. ಈ ವಿಷಯ ಅವರಿಗೆ

ಗೊತ್ತಿಲ್ಲವೆಂದು ಕಾಣುತ್ತದೆ. ಆದ್ದರಿಂದ, ಆಮೇಲೆ ತಮಗೆ ಏನೆಂಬುದನ್ನು ನಾನು ತಿಳಿಸುತ್ತೇನೆ. ಮಾನ್ಯ ರಾಜಗೌಡರವರು ಇದಕ್ಕೆ ಸಂಬಂಧಪಟ್ಟಂತೆ ಕೊಡತಕ್ಕಂಥ ಉತ್ತರ ನಮಗೆ ಸಮಾಧಾನವಾಗುವುದಿಲ್ಲ. ಒಂದು ವೇಳೆ ಈ ಸಂದರ್ಭದಲ್ಲಿ ತೀವ್ರವಾಗಿ ಪ್ರತಿಭಟನೆ ಅಥವಾ ಸಭಾತ್ಯಾಗ ಮಾಡೋಣವೆಂದರೆ, ಇದು ಪ್ರಶ್ನೋತ್ತರ ವೇಳೆ. ಏಕೆಂದರೆ, ನಮ್ಮ ಪ್ರಶ್ನೆ ಇವತ್ತು ಬರುತ್ತದೆ ಎಂದು ಅನೇಕ ಜನ ಮಾನ್ಯ ಸದಸ್ಯರು ಬೆಳಿಗ್ಗೆಯಿಂದ ಇಲ್ಲಿ ಕುಳಿತುಕೊಂಡಿದ್ದಾರೆ. ಆದರೆ, ಇದಕ್ಕೊಂದು ಪರಿಹಾರ ಇದೆ. ಅದೇನೆಂದರೆ, ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು. ಹಾಗೆಯೇ ಬೆಳೆ ವಿಮೆ ಬಿಡುಗಡೆಯಾಗಿಲ್ಲವೆಂದು ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳುತ್ತಿದ್ದಾರೆ. ಆದರೆ, ಹಣ ಬಿಡುಗಡೆಯಾಗಿದೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ, ವಸ್ತುಸ್ಥಿತಿ ಪ್ರಕಾರ ವಿಮೆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ಚರ್ಚೆಯಾಗಬೇಕು. ಹಾಗೆಯೇ ಬರಗಾಲಕ್ಕಾಗಿ ಮೇವನ್ನು ಇಟ್ಟುಕೊಂಡಿದ್ದೀರಾ ಎಂಬುದಕ್ಕೆ ಎಂತಹ ಬೇಜಾವಬ್ದಾರಿ ಉತ್ತರ ಕೊಟ್ಟಿದ್ದಾರೆ ನೋಡಿ ಹಾಗೆಯೇ ಬಯಲುಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರತಕ್ಕಂಥ ಬೀದರ್, ಕೋಲಾರ ಮತ್ತು ಬೆಂಗಳೂರು ಚಾಮರಾಜನಗರ ಹಾಗೂ ಇನ್ನು ಅನೇಕ ಜಿಲ್ಲೆಗಳಲ್ಲಿ ಬರಗಾಲ ಹೆಚ್ಚಾಗುತ್ತಿದೆ. ಆದರೆ, ಈ ಒಂದು ಹಿನ್ನೆಲೆಯಲ್ಲಿಯೂ ಕೂಡ ಇವರು ಇನ್ನೂ ಹಣ ಬಿಡುಗಡೆ ಮಾಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಈ ವರ್ಷ ಮಲೆನಾಡು ಪ್ರದೇಶವು ಕೂಡ ಬರಗಾಲ ಪ್ರದೇಶದ ಪಟ್ಟಿಯಲ್ಲಿ ಸೇರಿಕೊಂಡಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇದು ಬಹಳ ಆಶ್ಚರ್ಯಕರವಾದ ವಿಚಾರವಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಯಾವ ಕಾಲದಲ್ಲಿಯೂ ಕೂಡ ಮಲೆನಾಡು ಪ್ರದೇಶದಲ್ಲಿ ಬರಗಾಲ ಬಂದಿರಲಿಲ್ಲ. ಆದರೆ, ಈ ವರ್ಷ ಅಲ್ಲಿಯೂ ಕೂಡ ಬರಗಾಲ ಬಂದು ಮಲೆನಾಡಿನ ಅನೇಕ ಪ್ರದೇಶಗಳನ್ನು ಬರಗಾಲ ಪ್ರದೇಶದ ಪಟ್ಟಿಗೆ ಸೇರಿಸತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಕಳೆದ ವರ್ಷ ಆಗಿದ್ದಂಥ ಮಳೆಯ ಅರ್ಧದಷ್ಟು ಮಳೆ ಈ ವರ್ಷ ಮಲೆನಾಡು ಪ್ರದೇಶಗಳಲ್ಲಿ ಆಗಿಲ್ಲ. ಹೇಮಾವತಿ ಜಲಾಶಯ ಇವತ್ತಿನದಿವಸ ಯಾವರೀತಿ ಇದೆ ಎನ್ನತಕ್ಕಂಥದನ್ನು ನೋಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಅಧ್ಯಕ್ಷರೆ, ಇಂಜಿನಿಯರ್‌ಗಳು ಪ್ರತಿ ವರ್ಷ ಸುಮ್ಮನೆ ಸ್ಕೀಂಗಳನ್ನು ತಯಾರು ಮಾಡುತ್ತಾರೆ. ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆ ಮತ್ತು ಬರಗಾಲಕ್ಕೆ ಸಂಬಂಧಪಟ್ಟಂಥ ಯೋಜನೆಗಳು ಮತ್ತು ಪ್ರಧಾನಮಂತ್ರಿಗಳ ಗ್ರಾಮ ಸಡಕ್ ಯೋಜನೆ ಈ ರೀತಿಯಾಗಿ ಅನೇಕ ಸ್ಕೀಂಗಳನ್ನು ಇಂಜಿನಿಯರ್‌ಗಳು ತಯಾರು ಮಾಡುತ್ತಾರೆ. ನಬಾರ್ಡ್ ಮತ್ತು ಲೋಕೋಪಯೋಗಿ ಇಲಾಖೆಯ ಮೂಲಕ ಮಾಡಿಸತಕ್ಕಂಥ ಕೆಲಸಗಳು ಸ್ವಲ್ಪಮಟ್ಟಿಗೆ ಆಗುತ್ತಿವೆ. ಅದನ್ನು ನಾನು ಅಪ್ರೀಶಿಯೇಟ್ ಮಾಡುತ್ತೇನೆ. ಬಯಲು ಸೀಮೆ ಮತ್ತು ಮಲೆನಾಡು ಪ್ರದೇಶದ ಅಭಿವೃದ್ಧಿ ಮಂಡಳಿಗಳೆಂದು ಮಾಡಿದ್ದಾರೆ. ಇದರ ಬಗ್ಗೆ ನನಗೆ ಏನು ಅರ್ಥವಾಗುತ್ತಿಲ್ಲ. ಅಲ್ಲಿನ ಇಂಜಿನಿಯರ್‌ಗಳು ಎಸ್ಟಿಮೇಟ್‌ಗಳನ್ನು ತಯಾರು ಮಾಡಿಕೊಂಡು ಕಛೇರಿಗಳಿಗೆ ತಿರುಗುವುದೇ ಅವರ ಕೆಲಸವಾಗಿದೆ. ನಾವು ಮೂರು ತಿಂಗಳಿಗೆ ಒಂದು ಸಾರಿ

ಸಭೆಯನ್ನು ಮಾಡುತ್ತೇವೆ. ಅಲ್ಲಿಯೂ ಕೂಡ ಇದನ್ನೇ ನೋಡುತ್ತಿದ್ದೇವೆ. ಕೆಲಸಗಳು ಆಗುತ್ತವೆ ಎಂದು ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ತಮ್ಮ ಹಳ್ಳಿಗಳಲ್ಲಿ ಭರವಸೆಯನ್ನು ಕೊಟ್ಟಿರುತ್ತಾರೆ. ಒಂದು ವೇಳೆ ಈ ಒಂದು ಸ್ಕೀಂನಿಂದ ಕೆಲಸ ಮಾಡುವುದಕ್ಕೆ ಆಗದೇ ಇದ್ದರೆ, ಎಸ್‌ಜಿಆರ್‌ವೈ ಅಥವಾ ಇತರೇ ಸ್ಕೀಂಗಳ ಮೂಲಕ ಕೆಲಸಗಳನ್ನು ತೆಗೆದುಕೊಳ್ಳಬಹುದು ಬರಗಾಲಕ್ಕಾಗಿ ಕೇಂದ್ರ ಸರ್ಕಾರ ಅಕ್ಕಿಯನ್ನು ಕೊಡುತ್ತದೆ. ಹಾಗೆಯೇ, ಇದಕ್ಕೆ ರಾಜ್ಯ ಸರ್ಕಾರದವರು ಹಣ ಬಿಡುಗಡೆ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದರಿಂದ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬಹುದು. ಆದರೆ, ಈಗ ಏನಾಗಿದೆ ಎಂದರೆ, "ದ್ರಾಕ್ಷಿಗೋಸ್ಕರ ನರಿ ಕಾಯುವಂತೆ" ಕೆಲಸ ಆಗುತ್ತದೆ ಆಗುತ್ತೆ ಎಂದು ನಾವು ಕಾಯತಕ್ಕಂಥ ಪರಿಸ್ಥಿತಿ ಬಂದಿದೆ. ನಾಳೆ ದಿವಸ ಸಪ್ಲಿಮೆಂಟರಿ ಎಸ್ಟಿಮೇಟ್ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ನೀಡುತ್ತಾರೆ. ಆದ್ದರಿಂದ, ಆ ಒಂದು ಸಂದರ್ಭದಲ್ಲಿಯೇ ಬಯಲುಸೀಮೆ ಅಭಿವೃದ್ಧಿ ಮಂಡಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಬಾರ್ಡ್‌ನಿಂದ ಹಣ ಮಂಜೂರಾಗಿದೆ ಎಂದು ಹಿಂದೆ ಇದ್ದಂಥ ಮಾನ್ಯ ಮಂತ್ರಿಯವರು ಒಂದು ಸಭೆಯಲ್ಲಿ ಹೇಳಿದ್ದರು. ಆದ್ದರಿಂದ, ಮೊದಲು ಇವರು ಖರ್ಚು ಮಾಡಿ ಆನಂತರ ಅಲ್ಲಿಂದ ಹಣವನ್ನು ಡ್ರಾ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ತಾವು ದುಡ್ಡು ಬಿಡುಗಡೆ ಮಾಡಬೇಕು. ನೀವು ದುಡ್ಡು ಬಿಡುಗಡೆ ಮಾಡಿದರೆ ಮಾತ್ರ ನಬಾರ್ಡ್ ಬಿಡುಗಡೆ ಮಾಡತಕ್ಕಂಥ ಹಣವನ್ನು ಡ್ರಾ ಮಾಡಿ ಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ, ಇವರು ಮೊದಲು ಸುಮಾರು 10 ಕೋಟಿ ರೂಪಾಯಿ ಬಿಡುಗಡೆ ಮಾಡಿದರ ಕೆಲಸ ಚಾಲೂ ಆಗುತ್ತದೆ. ನಬಾರ್ಡ್ ಕಡೆಯಿಂದ ಕೂಡ ಹಣ ಬರುತ್ತದೆ. ಇದು ಅಲ್ಲಿರತಕ್ಕಂಥ ಒಂದು ಪ್ರಮುಖ ಪ್ರಶ್ನೆಯಾಗಿದೆ.

ಶ್ರೀ ಜೆ. ರಾಜುಗೌಡ:- ಮಾನ್ಯ ಅಧ್ಯಕ್ಷರೆ, ಬಯಲು ಸೀಮೆ ಅಭಿವೃದ್ಧಿ ಮಂಡಳಿ 1995ರಲ್ಲಿ ಅಸ್ತಿತ್ವಕ್ಕೆ ಬಂತು. 12 ಜಿಲ್ಲೆ, 52 ತಾಲ್ಲೂಕು ಮತ್ತು 76 ವಿಧಾನ ಸಭಾ ಕ್ಷೇತ್ರಗಳು ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಬರುತ್ತವೆ. ನಾವು ಇದುವರೆಗೂ 1109 ಕಾಮಗಾರಿಗಳನ್ನು ಪ್ರಾರಂಭ ಮಾಡಿದ್ದೇವೆ. ಇದರಲ್ಲಿ ಒಟ್ಟು 794 ಕೆಲಸಗಳು ಈಗಾಗಲೇ ಪೂರ್ಣಗೊಂಡಿವೆ. 515 ಕಾಮಗಾರಿಗಳು ಬಾಕಿ ಉಳಿದುಕೊಂಡಿವೆ. ಉಳಿದ ಕೆಲಸಗಳನ್ನು ಮುಂದಿನ ಮಾರ್ಚ್ ಒಳಗಾಗಿ ಪೂರೈಸುವುದಕ್ಕೆ ತೀರ್ಮಾನ ಮಾಡಿದ್ದೇವೆ. ಮತ್ತೆ ಹೊಸದಾಗಿ ಅನೇಕ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿದೆ. ಅನೇಕ ಜನ ಮಾನ್ಯ ಸದಸ್ಯರು ನಬಾರ್ಡ್ ಕೆಲಸದ ಬಗ್ಗೆ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಇಲ್ಲಿ ಹೇಳುವುದೇನೆಂದರೆ, ಸಚಿವ ಸಂಪುಟದ ಉಪ ಸಮಿತಿ ದಿನಾಂಕ 23:8:2001ರಲ್ಲಿ ಸುಮಾರು 44.1 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಸಲ್ಲಿಸಿದೆ. ಈಗಾಗಲೇ 110 ಕಾಮಗಾರಿಗಳಿಗೆ 12.61 ಕೋಟಿ ರೂಪಾಯಿ ನಬಾರ್ಡ್ ಬಿಡುಗಡೆ ಮಾಡಿರತಕ್ಕಂಥದಕ್ಕೆ ಅನುಮೋದನೆ ಸಿಕ್ಕದೆ. ಇದು ಇನ್ನೂ ಸಚಿವ ಸಂಪುಟದ ಮುಂದೆ ಇದೆ. ಸದರಿ ಕೆಲಸಕ್ಕೆ ಸಂಬಂಧಪಟ್ಟಂತೆ ಇನ್ನು ಹಣ ಬಿಡುಗಡೆಯಾಗಿಲ್ಲ. ಸದರಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಸನ್ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ

ಪ್ರಸ್ತಾಪ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಬಯಲು ಸೀಮೆ ಅಭಿವೃದ್ಧಿ ಮಂಡಳಿಯನ್ನು ಮುಚ್ಚತಕ್ಕಂಥ ಕೆಲಸ ಮಾಡುವುದಿಲ್ಲ. ಅದನ್ನು ಮುಚ್ಚಿದರೆ 12 ಜಿಲ್ಲೆಗಳ ಅಭಿವೃದ್ಧಿ ಕಾರ್ಯಗಳು ನಿಂತು ಹೋಗುತ್ತವೆ. ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಆದಷ್ಟು ಬೇಗ ನಬಾರ್ಡ್ ಹಣ ಮತ್ತು ಬಾಕಿ ಇರತಕ್ಕಂಥ ಹಣವನ್ನು ಬಿಡುಗಡೆ ಮಾಡಬೇಕೆಂದು ಕೇಳುತ್ತೇನೆ. ಇದಕ್ಕಾಗಿ ನನಗೆ ದಯಮಾಡಿ ಅವಕಾಶ ಕೊಡಬೇಕೆಂದು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

ಬೈಂದೂರು ಕ್ಷೇತ್ರದಲ್ಲಿ ಪ್ರೌಢಶಾಲೆಗಳ ಮಂಜೂರಾತಿ

102(375) ಶ್ರೀ ಗೋಪಾಲ್ ಪೂಜಾರಿ ಕೆ. (ಬೈಂದೂರು) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಪ್ರೌಢಶಾಲೆಗಳ ಮಂಜೂರಾತಿ ಕೋರಿ ಉಡುಪಿ ಜಿಲ್ಲಾ ಶಿಕ್ಷಣ ಉಪ ನಿರ್ದೇಶಕರ ಕಛೇರಿಯಿಂದ ಪ್ರಸ್ತಾವನೆ ಬಂದಿದೆ:

ಆ) ಈ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಈ ಶೈಕ್ಷಣಿಕ ವರ್ಷದಲ್ಲಿ ಮಂಜೂರಾತಿ ನೀಡಲಾಗುವುದೆ;

ಇ) ಸಾಧ್ಯವಾಗದಿದ್ದಲ್ಲಿ ಕಾರಣಗಳನ್ನು ನೀಡುವುದು?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಗೋಪಾಲ್ ಪೂಜಾರಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಪ್ರಸ್ತಾವನೆ ಬಂದಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. 1998-99ರಲ್ಲಿ ಒಂದು ಪ್ರಸ್ತಾವನೆಯನ್ನು ಮತ್ತು 1999-2000ನೇ ಇಸವಿಯಲ್ಲಿ ಒಂದು ಪ್ರಸ್ತಾವನೆ ಹಾಗೂ ದಿನಾಂಕ: 20-07-2001ರಲ್ಲಿ ಒಂದು ಪ್ರಸ್ತಾವನೆ ಅಂದರೆ ಕಳೆದ ಮೂರು ವರ್ಷಗಳಿಂದ ಮೂರು ಪ್ರಸ್ತಾವನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಆದರೆ ಪ್ರಸ್ತಾವನೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇದಕ್ಕೆ ನಾನು ಏನು ಹೇಳಬೇಕು? ಹಿಂದಿನ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಾನು ಬಹಳ ಒತ್ತಡ ಮಾಡಿದ್ದಕ್ಕೆ ಪ್ರೌಢಶಾಲೆ ಕೊಡುತ್ತೇವೆಂದು ಈ ಸದನದಲ್ಲಿ ಉತ್ತರ ಕೊಟ್ಟರು. ಆದರೆ, ನಾನು ಕಳೆದ ಮೂರು ವರ್ಷಗಳಿಂದ ಪ್ರಸ್ತಾವನೆ ಕಳುಹಿಸಿ ಪ್ರಯತ್ನ ಮಾಡುತ್ತಿದ್ದರೂ ಸಹ ಪ್ರಸ್ತಾವನೆ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ತ್ರಾಸಿ ಮತ್ತು ಗುಜ್ಜಾಡಿಪುರದಲ್ಲಿ ಸಾರ್ವಜನಿಕರಿಂದ ಒಂದು ಲಕ್ಷ ರೂಪಾಯಿಯಷ್ಟು ದೇಣಿಗೆಯನ್ನು ಕಲೆಕ್ಟ್ ಮಾಡಿ ಹಣವನ್ನು ಬ್ಯಾಂಕ್‌ನಲ್ಲಿ ಇಟ್ಟುಕೊಂಡಿದ್ದಾರೆ. ಅಲ್ಲದೆ ಶಾಲೆಗೆ ಬೇಕಾಗಿರತಕ್ಕಂಥ ಫರ್ನಿಚರ್‌ಗಳನ್ನು ಅಲ್ಲಿನ ಗ್ರಾಮಸ್ಥರು ಒದಗಿಸಿಕೊಡುವುದಕ್ಕೆ ಮುಂದೆ ಬಂದಿದ್ದಾರೆ. 178 ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು 5 ಪದವಿ ಪೂರ್ವ ಕಾಲೇಜು ಹಾಗೂ 5 ಪ್ರೌಢಶಾಲೆಗಳು ಅಲ್ಲಿವೆ. ಈಗ ಇರತಕ್ಕಂಥ ಹೈಸ್ಕೂಲ್‌ನಲ್ಲಿ ಕಾಲು ಹಾಕುವುದಕ್ಕೂ ಸಹ ಜಾಗವಿಲ್ಲ. ನಾನು ಪ್ರತಿ ವರ್ಷ ಪ್ರಸ್ತಾವನೆಯನ್ನು ಕಳುಹಿಸಿ ಕೊಟ್ಟರೂ ಪ್ರಸ್ತಾವನೆ ಬಂದಿಲ್ಲವೆಂದು ತಾವು ಉತ್ತರ ಕೊಟ್ಟರೆ, ನಾನು ಅಲ್ಲಿರತಕ್ಕಂಥ ಜನರಿಗೆ ಯಾವರೀತಿಯಾದ ಉತ್ತರ ಕೊಡಬೇಕೆಂದು ತಾವೇ